ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೫

# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತ ಮೂರನೇ ಅಧಿವೇಶನ

## ಸೋಮವಾರ, ದಿನಾಂಕ: ೨೨ನೇ ಜುಲೈ, ೨೦೨೪

---

### ಸಮೂಹ – I

೧. ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು

೨. ಇಂಧನ ಸಚಿವರು

೩. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

೪. ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

೫. ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು

೬. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

೭. ಉನ್ನತ ಶಿಕ್ಷಣ ಸಚಿವರು

---

## ಮಹಿಳೆಯರಲ್ಲಿ ಸ್ತನ ಮತ್ತು ಗರ್ಭಕಂಠದ ಕ್ಯಾನ್ಸರ್ ಹೆಚ್ಚುತ್ತಿರುವ ಬಗ್ಗೆ

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) –**

೬೧ (೬೪೩) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಸ್ತನ ಮತ್ತು ಗರ್ಭಕಂಠದ ಕ್ಯಾನ್ಸರ್‌ಗಳು ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಅಧ್ಯಯನ/ಮೌಲ್ಯಮಾಪನ ನಡೆಸಿದೆಯೇ; ಹಾಗಿದ್ದಲ್ಲಿ, ಈ ಅಧ್ಯಯನ/ಮೌಲ್ಯಮಾಪನದ ವಿವರಗಳೇನು; (ಜಿಲ್ಲಾವಾರು ಪೂರ್ಣ ವಿವರ ನೀಡುವುದು)

(ಇ) ರಾಜ್ಯದಲ್ಲಿ ೩೫–೪೦ರ ವಯಸ್ಸಿನ ಮಹಿಳೆಯರಿಗೆ ಕ್ಯಾನ್ಸರ್ ತಪಾಸಣೆಯನ್ನು ಕಡ್ಡಾಯಗೊಳಿಸಲಾಗಿದೆಯೇ; ಇಲ್ಲದಿದ್ದಲ್ಲಿ, ಕಡ್ಡಾಯಗೊಳಿಸಲಾಗುವುದೇ; (ಪೂರ್ಣ ಮಾಹಿತಿ ನೀಡುವುದು)

(ಈ) ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ರಾಷ್ಟ್ರೀಯ ಆರೋಗ್ಯ ಅಭಿಯಾನ ಮತ್ತು ಇತರೆ ಯೋಜನೆಗಳಡಿ ಕ್ಯಾನ್ಸರ್ ತಡೆಗಟ್ಟಲು ನೀಡುತ್ತಿರುವ ನೆರವು ಮತ್ತು ಸವಲತ್ತುಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು)

(ಉ) ರಾಜ್ಯ ಸರ್ಕಾರ ೯ ರಿಂದ ೧೪ ವರ್ಷದ ಹೆಣ್ಣು ಮಕ್ಕಳಿಗೆ ನೀಡಲಾಗುವ Human Papilloma Virus-Data Testನ್ನು ಕಡ್ಡಾಯ ಮಾಡಲಾಗುತ್ತಿದೆಯೇ; ಮತ್ತು ಈ ಲಸಿಕೆಯನ್ನು ಉಚಿತವಾಗಿ ಅಥವಾ ರಿಯಾಯಿತಿ ದರದಲ್ಲಿ ನೀಡಲು ಆಲೋಚಿಸಿದೆಯೇ? (ಪೂರ್ಣ ಮಾಹಿತಿ ನೀಡುವುದು)

## ರೈತರ ಕೃಷಿಗಾಗಿ ಒದಗಿಸುತ್ತಿರುವ ಸೋಲಾರ್ ಚಾಲಿತ ಪಂಪ್‌ಸೆಟ್‌ಗಳ ಸಂಪರ್ಕದ ಕುರಿತು

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೬೨ (೬೪೦) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ರೈತರಿಗೆ ಕೃಷಿಗಾಗಿ ಒದಗಿಸುತ್ತಿದ್ದ ವಿದ್ಯುತ್ ಚಾಲಿತ ಪಂಪ್‌ಸೆಟ್ ಸಂಪರ್ಕದ ಯೋಜನೆಯನ್ನು ಸ್ಥಗಿತಗೊಳಿಸಿ, ಸೋಲಾರ್ ಚಾಲಿತ ಪಂಪ್‌ಸೆಟ್ ಸಂಪರ್ಕವನ್ನು ಒದಗಿಸುವ ಯೋಜನೆಯನ್ನು ಜಾರಿಗೆ

ಬರುವಂತೆ ಆದೇಶ ಹೊರಡಿಸಲಾಗಿದ್ದು, ಆದೇಶದ ಪ್ರತಿಯನ್ನು ಒದಗಿಸುವುದು;

(ಆ) ಕೊಡಗು ಜಿಲ್ಲೆಯಲ್ಲಿ ಈಗಾಗಲೇ ನೀಡಲಾಗಿರುವ ವಿದ್ಯುತ್ ಪಂಪ್‌ಸೆಟ್ ಸಂಪರ್ಕದ ಫಲಾನುಭವಿಗಳು ಎಷ್ಟು; ಸೋಲಾರ್ ಮೂಲಕ ಪಂಪ್‌ಸೆಟ್ ಸಂಪರ್ಕದ ಯೋಜನೆಗೆ ಸಲ್ಲಿಕೆಯಾಗಿರುವ ಅರ್ಜಿಗಳು ಎಷ್ಟು;

(ಇ) ಈ ಯೋಜನೆಗಳಿಗೆ ಒದಗಿಸಲಾದ ಸಬ್ಸಿಡಿಯ ವಿಸ್ತೃತ ವಿವರವನ್ನು ಒದಗಿಸುವುದು;

(ಈ) ಕೊಡಗು ಜಿಲ್ಲೆಯ ರೈತರಿಗೆ ಸೋಲಾರ್ ಚಾಲಿತ ಪಂಪ್‌ಸೆಟ್ ಸಂಪರ್ಕದ ಯೋಜನೆಯ ನಿರ್ವಹಣೆಗೆ ತೊಂದರೆಯಾಗುವುದರಿಂದ ವಿದ್ಯುತ್ ಚಾಲಿತ ಪಂಪ್‌ಸೆಟ್ ಸಂಪರ್ಕದ ಯೋಜನೆಯನ್ನು ಮುಂದುವರಿಸುವಂತೆ ರೈತರು ಆಗ್ರಹ ವ್ಯಕ್ತಪಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು?

## ಚಿತ್ರದುರ್ಗ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾಲಯಕ್ಕೆ ನೀಡಿರುವ ಶೋಕಾಸ್ ನೋಟಿಸ್‌ನ ಬಗ್ಗೆ

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೬೩ (೭೨೪) ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಚಿತ್ರದುರ್ಗ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾಲಯಕ್ಕೆ ರಾಷ್ಟ್ರೀಯ ವೈದ್ಯಕೀಯ ಆಯೋಗದಿಂದ (ಎನ್.ಎಂ.ಸಿ.) ಶೋಕಾಸ್ ನೋಟಿಸ್ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಚಿತ್ರದುರ್ಗ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾಲಯದಿಂದ ವಾರ್ಷಿಕ ಘೋಷಣೆಯ ನಮೂನೆಯಲ್ಲಿ ಎನ್.ಎಂ.ಸಿ.ಗೆ ನೀಡಿರುವ ಮಾಹಿತಿಯು ನ್ಯೂನತೆಗಳಿಂದ ಕೂಡಿದೆ ಎಂದು ತಿಳಿದು ಬಂದಿದ್ದು, ಈ ಬಗ್ಗೆ ಕಾಲೇಜು ಯಾವ ರೀತಿಯ ಪ್ರತಿಕ್ರಿಯೆ ನೀಡಿದೆ; ಇದರ ಬಗ್ಗೆ ಸರ್ಕಾರದ ನಿಲುವೇನು;

(ಇ) ಎನ್‌ಎಂಸಿಯು ಚಿತ್ರದುರ್ಗ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾಲಯಕ್ಕೆ ಎಂಬಿಬಿಎಸ್ ಸೀಟ್‌ಗಳನ್ನು ಕಡಿಮೆ ಮಾಡುವುದಾಗಿ ತಿಳಿಸಿದ್ದು, ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

(ಈ) ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳಿಗೆ ಕಾಲೇಜು ಕಟ್ಟಡ ಮತ್ತು ವಸತಿ ನಿಲಯಗಳ ವ್ಯವಸ್ಥೆಗಳನ್ನು ಪೂರ್ಣಗೊಳಿಸಲು ಎಷ್ಟು ಅನುದಾನ ನೀಡಲಾಗಿದೆ? (ವಿವರ ನೀಡುವುದು)

## ಬೆಂಗಳೂರು ನಗರದ ಸುತ್ತಮುತ್ತಲಿನ ಕೆರೆಗಳು ಕಲುಷಿತಗೊಂಡಿರುವ ಬಗ್ಗೆ

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೬೪ (೬೧೫) ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸುತ್ತಮುತ್ತಲಿನ ಕೆಲವು ಕೆರೆಗಳಿಗೆ ಕಲುಷಿತ ನೀರು ಸೇರ್ಪಡೆಗೊಂಡು ಜಲಚರಗಳಿಗೆ ಕಂಟಕವಾಗಿ ಪರಿಣಮಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ರೀತಿ ಎಷ್ಟು ಕೆರೆಗಳು ಕಲುಷಿತಗೊಂಡಿವೆ; ಈ ಕೆರೆಗಳ ನೀರಿನ ಸ್ಯಾಂಪಲ್‌ಗಳನ್ನು ಪರೀಕ್ಷಿಸಲಾಗಿದೆಯೇ; (ಕೆರೆಗಳ ಮಾಹಿತಿ ನೀಡುವುದು)

(ಆ) ಈ ಕೆರೆಗಳಿಗೆ ಕಲುಷಿತ ನೀರು ಮತ್ತು ಕೈಗಾರಿಕಾ ತ್ಯಾಜ್ಯಗಳನ್ನು ಹೊರಬಿಡುತ್ತಿರುವ ಕೈಗಾರಿಕೆಗಳನ್ನು ಗುರುತಿಸಲಾಗಿದೆಯೇ; ಗುರುತಿಸಿದ್ದಲ್ಲಿ, ಅಂತಹವರ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ದಾಖಲೆಗಳ ಸಹಿತ ವಿವರ ನೀಡುವುದು)

(ಇ) ಕಲುಷಿತ ನೀರು ಕೈಗಾರಿಕಾ ತ್ಯಾಜ್ಯಗಳನ್ನು ಕೆರೆಗಳಿಗೆ ಬಿಡದಂತೆ ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)

## ಮೈಸೂರು ವಿಭಾಗದಲ್ಲಿ ಪ್ರಾದೇಶಿಕ ಔಷಧ ಪರೀಕ್ಷಾ ಪ್ರಯೋಗಾಲಯ ಸ್ಥಾಪನೆ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) –**

೬೫ (೬೦೯) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಔಷಧಿ ಮತ್ತು ಕಾಂತಿವರ್ಧಕಗಳ ಗುಣಮಟ್ಟದ ವಿಶ್ಲೇಷಣೆಗಳಿಗಾಗಿ ಔಷಧ ಪರೀಕ್ಷಾ ಪ್ರಯೋಗಾಲಯಗಳನ್ನು ರಾಜ್ಯದಲ್ಲಿ ಎಲ್ಲೆಲ್ಲಿ ಸ್ಥಾಪಿಸಲಾಗಿದೆ; (ವಿವರ ನೀಡುವುದು)

(ಆ) ಔಷಧ ಪರೀಕ್ಷಾ ಪ್ರಯೋಗಾಲಯಗಳಿಗೆ ಮಂಜೂರಾಗಿರುವ, ಕರ್ತವ್ಯ ನಿರ್ವಹಿಸುತ್ತಿರುವ ಹಾಗೂ ಖಾಲಿಯಿರುವ ಸರ್ಕಾರಿ ವಿಶ್ಲೇಷಕರ ಹುದ್ದೆಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಇ) ಮೈಸೂರು ವಿಭಾಗದ ಔಷಧ ಮತ್ತು ಕಾಂತಿವರ್ಧಕಗಳ ಗುಣಮಟ್ಟವನ್ನು ಪರೀಕ್ಷಿಸಲು ಔಷಧ ಮಾದರಿಗಳನ್ನು ಪ್ರಸ್ತುತ ಯಾವ ಯಾವ ಔಷಧ ಪರೀಕ್ಷಾ ಪ್ರಯೋಗಾಲಯಗಳಿಗೆ ಕಳುಹಿಸಲಾಗುತ್ತಿದೆ;

(ಈ) ಮೈಸೂರು ವಿಭಾಗದಲ್ಲಿ ಔಷಧ ತಯಾರಿಕಾ ಘಟಕಗಳು, ದಾಸ್ತಾನು ಮಳಿಗೆಗಳು ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಔಷಧ ಅಂಗಡಿಗಳು ಇರುವುದರಿಂದ ಔಷಧ ಮತ್ತು ಕಾಂತಿವರ್ಧಕಗಳ ಗುಣಮಟ್ಟ ಪರೀಕ್ಷಿಸಲು ಹಾಗೂ ವಿಶ್ಲೇಷಣಾ ವರದಿಗಳನ್ನು ತ್ವರಿತವಾಗಿ ನೀಡಲು ಅನುಕೂಲವಾಗುವಂತೆ ಮೈಸೂರು ವಿಭಾಗದಲ್ಲಿ ಪ್ರಾದೇಶಿಕ ಔಷಧ ಪರೀಕ್ಷಾ ಪ್ರಯೋಗಾಲಯ ಸ್ಥಾಪಿಸುವ ಕುರಿತು ಸರ್ಕಾರದ ನಿಲುವೇನು? (ವಿವರ ನೀಡುವುದು)

## ಆಯುಷ್ ಇಲಾಖೆಯ ಔಷಧಿ ಮತ್ತು ವೈದ್ಯಾಧಿಕಾರಿಗಳ ಕುರಿತು

**ಶ್ರೀ ಹೆಚ್.ಎಸ್. ಗೋಪಿನಾಥ್** (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –

೬೬ (೬೭೧) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಎಷ್ಟು ಆಯುಷ್ ಚಿಕಿತ್ಸಾಲಯಗಳಿವೆ; (ವಿವರ ನೀಡುವುದು)

(ಆ) ಈ ಆಯುಷ್ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಸಮರ್ಪಕವಾಗಿ ಔಷಧಿಗಳು ದೊರೆಯದೆ ಇರುವುದರ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು;

(ಇ) ಆಯುಷ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಒಟ್ಟು ಸರ್ಕಾರಿ ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು; ಮತ್ತು ಅವರುಗಳಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ವೈದ್ಯರುಗಳ ಸಂಖ್ಯೆ ಎಷ್ಟು;

(ಈ) ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಸರ್ಕಾರಿ ಆಯುಷ್ ಚಿಕಿತ್ಸಾಲಯವನ್ನು ತೆರೆಯಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ; (ವಿವರ ನೀಡುವುದು)

(ಉ) ಸರ್ಕಾರಿ ಆಯುಷ್ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರುಗಳು, ಸಿಬ್ಬಂದಿಗಳಲ್ಲಿ ಗೈರು ಹಾಜರು ಆಗುತ್ತಿರುವವರ ಸಂಖ್ಯೆ ಎಷ್ಟು; ಅನಧಿಕೃತವಾಗಿ ಗೈರು ಹಾಜರು ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ಸಂಪೂರ್ಣ ವಿವರ ನೀಡುವುದು)

## ಅರಣ್ಯ ಇಲಾಖೆಯಲ್ಲಿ ನಿವೃತ್ತ ಅಧಿಕಾರಿಗಳನ್ನು ವ್ಯವಸ್ಥಾಪನಾಧಿಕಾರಿಯಾಗಿ ನೇಮಿಸಿರುವ ಬಗ್ಗೆ

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೬೭ (೭೦೧) ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ಅರಣ್ಯ ಕಾಯ್ದೆ–೧೦೬೩ರ ಕಲಂ–೪ರಡಿ ಅಧಿಸೂಚಿಸಿರುವ ಪ್ರಕರಣಗಳಲ್ಲಿ ಅರಣ್ಯ ಕ್ಷೇತ್ರ ನಿರ್ಧರಣೆ ಮಾಡುವ ಕಾರ್ಯಕ್ಕಾಗಿ ಅರಣ್ಯ ವ್ಯವಸ್ಥಾಪನಾಧಿಕಾರಿಗಳನ್ನು (ನಿವೃತ್ತಿ ಅಧಿಕಾರಿಗಳನ್ನು) ನೇಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಸದರಿ ಅಧಿಕಾರಿಗಳನ್ನು ನೇಮಿಸುವಲ್ಲಿ ಅನುಸರಿಸಲಾದ ಮಾನದಂಡಗಳೇನು; (ವಿವರ ನೀಡುವುದು)

(ಇ) ರಾಜ್ಯದಲ್ಲಿ ಈ ರೀತಿ ಎಷ್ಟು ಅಧಿಕಾರಿಗಳನ್ನು ನೇಮಿಸಲಾಗಿರುತ್ತದೆ; (ಪೂರ್ಣ ವಿವರ ನೀಡುವುದು)

(ಈ) ಸದರಿ ಪ್ರಕರಣಗಳನ್ನು ಇತ್ಯರ್ಥಪಡಿಸುವಲ್ಲಿ ಉಪ ವಿಭಾಗಾಧಿಕಾರಿಗಳ ಬದಲಿಗೆ ನಿವೃತ್ತ ಅಧಿಕಾರಿಗಳನ್ನು ಅರಣ್ಯ ವ್ಯವಸ್ಥಾಪನಾಧಿಕಾರಿಗಳನ್ನಾಗಿ ನೇಮಿಸಲು ಕಾರಣಗಳೇನು;

(ಉ) ಯಾವ ನಿಯಮಾವಳಿ ಪ್ರಕಾರ ಸದರಿ ಅಧಿಕಾರಿಗಳನ್ನು ನೇಮಿಸಲಾಗಿದೆ;

(ಊ) ಕರ್ನಾಟಕ ಅರಣ್ಯ ಕಾಯ್ದೆ–೧೯೬೩ರ ಕಲಂ–೪ರಡಿ ಈ ರೀತಿ ನಿವೃತ್ತ ಅಧಿಕಾರಿಗಳನ್ನು ನೇಮಕ ಮಾಡಲು ಕಾನೂನಿನಲ್ಲಿ ಅವಕಾಶವಿದೆಯೇ; (ವಿವರ ನೀಡುವುದು)

(ಋ) ಈ ರೀತಿ ನಿವೃತ್ತ ಅಧಿಕಾರಿಗಳನ್ನು ನೇಮಿಸಿರುವುದರಿಂದ ನ್ಯಾಯದಾನ ನೀಡುವಲ್ಲಿ ರೈತರಿಗೆ ಮತ್ತು ಸಾರ್ವಜನಿಕರಿಗೆ ಕಿರುಕುಳ ಮತ್ತು ಅನ್ಯಾಯ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಎ) ಸರ್ಕಾರದ ಆದೇಶ ಸಂಖ್ಯೆ: ಅಪಜೀ:೪೨:ಇಪಿಸಿ:೨೦೨೪, ದಿನಾಂಕ: ೦೩–೦೨–೨೦೨೪ರಂತೆ ನಿವೃತ್ತ ಅಧಿಕಾರಿಗಳ ನೇಮಕಾತಿಯನ್ನು ರದ್ದುಪಡಿಸಿ, ಉಪ ವಿಭಾಗಾಧಿಕಾರಿಗಳನ್ನು ನೇಮಿಸಲು ಸರ್ಕಾರವು ಯಾವ ಕಾಲಮಿತಿಯಲ್ಲಿ ಕ್ರಮ ವಹಿಸುವುದು?

## ಸಿಂಧನೂರಿಗೆ ಹೊಸ ಪಾಲಿಟೆಕ್ನಿಕ್ ಕಾಲೇಜು ಮಂಜೂರು ಮಾಡುವ ಬಗ್ಗೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) –**

೬೮ (೭೫೭) ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೭–೧೮ನೇ ಸಾಲಿನಲ್ಲಿ ಸಿಂಧನೂರಿಗೆ ಮಂಜೂರಾತಿ ಆಗಿದ್ದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜನ್ನು ಕಾಗವಾಡಕ್ಕೆ ಸ್ಥಳಾಂತರಿಸಲಾಗಿರುವುದು ನಿಜವೇ; ಹಾಗಿದ್ದಲ್ಲಿ ಯಾವ ಕಾರಣಕ್ಕಾಗಿ ಸ್ಥಳಾಂತರಿಸಲಾಗಿದೆ; ಸಿಂಧನೂರಿಗೆ ಹೊಸ ಪಾಲಿಟೆಕ್ನಿಕ್ ಕಾಲೇಜು ಮಂಜೂರು ಮಾಡಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ; (ವಿವರ ನೀಡುವುದು)

(ಆ) ಕಲ್ಯಾಣ ಕರ್ನಾಟಕ ವಿಭಾಗದಲ್ಲಿಯೇ ಅತಿ ಹೆಚ್ಚು ಪ್ರೌಢ ಶಾಲೆಗಳನ್ನು ಹೊಂದಿರುವ ಸಿಂಧನೂರು ತಾಲ್ಲೂಕಿನಲ್ಲಿ ಸರ್ಕಾರಿ ಪ್ರೌಢ ಶಾಲೆಗಳು ೫೦, ಅನುದಾನಿತ ಪ್ರೌಢ ಶಾಲೆಗಳು ೧೧ ಹಾಗೂ ಅನುದಾನರಹಿತ ಪ್ರೌಢಶಾಲೆಗಳು ೩೯ ಇದ್ದು, ಈ ಪ್ರೌಢ ಶಾಲೆಗಳಿಂದ ತೇರ್ಗಡೆಯಾಗುವ ವಿದ್ಯಾರ್ಥಿಗಳು ಡಿಪ್ಲೋಮೊ ಕೋರ್ಸ್‌ಗಳಿಗೆ ವ್ಯಾಸಂಗ ಮಾಡಲು ಬೇರೆ ಜಿಲ್ಲೆಗಳಿಗೆ ಹೋಗುತ್ತಿರುವುದರಿಂದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಆದಷ್ಟು ತುರ್ತಾಗಿ ಸಿಂಧನೂರಿಗೆ ಹೊಸ ಪಾಲಿಟೆಕ್ನಿಕ್ ಕಾಲೇಜು ಮಂಜೂರು ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

## ಕಲಬುರಗಿಯಲ್ಲಿ ನಕಲಿ ವೈದ್ಯರ ಹಾವಳಿ ಕುರಿತು

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) –**

೬೯ (೫೭೪) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಲಬುರಗಿ ನಗರದಲ್ಲಿ ಇದುವರೆವಿಗೆ ಎಷ್ಟು ನಕಲಿ ವೈದ್ಯರನ್ನು ಗುರುತಿಸಿ ಅವರ ಮೇಲೆ ಕ್ರಮ ಜರುಗಿಸಿ, ಅವರು ನಡೆಸುತ್ತಿರುವ ದವಾಖಾನೆಗಳನ್ನು ರದ್ದುಪಡಿಸಲಾಗಿದೆ; (ವಿವರ ಒದಗಿಸುವುದು)

(ಆ) ನಕಲಿ ವೈದ್ಯರು ಖಾಸಗಿಯಾಗಿ ದವಾಖಾನೆ ತೆರೆದು ಚಿಕಿತ್ಸೆ ನೀಡುತ್ತಿರುವ ದವಾಖಾನೆಗಳ ಸಂಖ್ಯೆ ಎಷ್ಟು; (ಹೆಸರು ಸಮೇತ ವಿವರ ಒದಗಿಸುವುದು)

(ಇ) ಇವರುಗಳ ಮೇಲೆ ಏನು ಕ್ರಮ ಜರುಗಿಸಲಾಗಿದೆ? (ವಿವರ ಒದಗಿಸುವುದು)

## ಚಾಮರಾಜನಗರದಲ್ಲಿ "ಅರಣ್ಯ ಮಹಾವಿದ್ಯಾಲಯ (ಕಾಲೇಜು)" ಸ್ಥಾಪನೆ ಕುರಿತು

**ಡಾ: ಯತೀಂದ್ರ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು) –**

೭೦ (೬೫೭) ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ:–

ಚಾಮರಾಜನಗರ ಜಿಲ್ಲೆಯ ಶೇಕಡಾ ೪೮.೩೬ರಷ್ಟು ಅರಣ್ಯ ಪ್ರದೇಶದಿಂದ ಕೂಡಿದ್ದು, ಒಂದು ನೂತನ "ಅರಣ್ಯ ಮಹಾವಿದ್ಯಾಲಯ (ಕಾಲೇಜು)" ಸ್ಥಾಪನೆಗೆ ಸೂಕ್ತವಾಗಿದ್ದು, ಈ ಕುರಿತು ರಾಜ್ಯ ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ; ಅದು ಯಾವ ಹಂತದಲ್ಲಿದೆ?

## ಅನುದಾನರಹಿತ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರುಗಳಿಗೆ ವೇತನ ಹೆಚ್ಚಿಸುವ ಬಗ್ಗೆ

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) –**

೭೧ (೬೪೯) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಅನುದಾನರಹಿತ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರುಗಳಿಗೆ ನೀಡುವ ವೇತನ ಬಹಳ ಕಡಿಮೆ ನೀಡುವುದರಿಂದ ಸದರಿ ಉಪನ್ಯಾಸಕರುಗಳಿಗೆ ಅನಾರೋಗ್ಯದ ಸಮಯದಲ್ಲಿ ವೈದ್ಯಕೀಯ ವೆಚ್ಚವನ್ನು ಭರಿಸಲು ಸಾಧ್ಯವಾಗದೆ ಸೂಕ್ತ ಚಿಕಿತ್ಸೆ ಪಡೆಯಲು ಕಷ್ಟಕರವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಈ ಸಂಬಂಧ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರುಗಳಿಗೆ ಉಪಯೋಗವಾಗುವ ನಿಟ್ಟಿನಲ್ಲಿ ಆರೋಗ್ಯ

ಸಂಜೀವಿನಿ ಅಥವಾ ಆರೋಗ್ಯ ಕಾರ್ಡ್‌ನ್ನು ಸಹ ವಿತರಿಸುವುದರ ಬಗ್ಗೆ ಸರ್ಕಾರದ ಕ್ರಮವೇನು;

(ಇ) ಇದೇ ರೀತಿ ಸರ್ಕಾರಿ ಪದವಿಪೂರ್ವ ಕಾಲೇಜುಗಳ ನೌಕರರಿಗೆ ನೀಡುತ್ತಿರುವ ಆರೋಗ್ಯ ಸಂಜೀವಿನಿ ಸೌಲಭ್ಯವನ್ನು ಅನುದಾನಿತ ಕಾಲೇಜುಗಳಿಗೂ ವಿಸ್ತರಿಸುವುದರ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ; ಬಂದಿದ್ದಲ್ಲಿ, ಸೌಲಭ್ಯವನ್ನು ಯಾವಾಗ ಜಾರಿ ಮಾಡಲಾಗುವುದು?

## ಸರ್ಕಾರಿ ಪ್ರೌಢಶಾಲಾ ಶಿಕ್ಷಕರಿಗೆ ಬಡ್ತಿ ನೀಡದಿರುವ ಕುರಿತು

**ಡಾ: ಚಂದ್ರಶೇಖರ ಬಸವರಾಜ ಪಾಟೀಲ (ಪದವೀಧರರ ಕ್ಷೇತ್ರ ) –**

೭೨ (೭೦೭) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೧೨ ವರ್ಷಗಳಿಂದ ಸರ್ಕಾರಿ ಪ್ರೌಢ ಶಾಲೆಯ ಸಹ ಶಿಕ್ಷಕರಿಗೆ ಪದವಿ ಪೂರ್ವ ಕಾಲೇಜಿಗೆ ಉಪನ್ಯಾಸಕರಾಗಿ ಬಡ್ತಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಬಡ್ತಿ ನೀಡದಿರಲು ಕಾರಣವೇನು;

(ಇ) ಇವರುಗಳಿಗೆ ಯಾವ ಕಾಲಮಿತಿಯೊಳಗೆ ಬಡ್ತಿ ನೀಡಲಾಗುವುದು?

## ಸಹಾಯಕ ಪ್ರಾಧ್ಯಾಪಕರಿಗೆ ನೇಮಕಾತಿ ಆದೇಶ ನೀಡುವ ಕುರಿತು

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ ) –**

೭೩ (೭೧೫) ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೨೧ರ ಸಹಾಯಕ ಪ್ರಾಧ್ಯಾಪಕರ ನೇಮಕಾತಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಪ್ರಕ್ರಿಯೆಯು ಯಾವ ಹಂತದಲ್ಲಿದೆ;

(ಆ) ಆಯ್ಕೆ ಪಟ್ಟಿ ಪ್ರಕಟಣೆಯಾಗಿ, ದಾಖಲೆಗಳ ಪರಿಶೀಲನೆ ಬಹುತೇಕ ಪೂರ್ಣಗೊಂಡಿದ್ದರೂ ಸಹ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲು ವಿಳಂಬ ಮಾಡುತ್ತಿರುವ ಕಾರಣವೇನು;

(ಇ) ಹೈದರಾಬಾದ್–ಕರ್ನಾಟಕ ವಿಭಾಗದ ಮೀಸಲಾತಿ ವಿಷಯವಾಗಿ ಬಂದಂತಹ ಸರ್ಕಾರದ ಸುತ್ತೋಲೆಯನ್ನು ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಎತ್ತಿಹಿಡಿದಿದ್ದು, ಇದೇ ವಿಷಯವಾಗಿ ಉಚ್ಛನ್ಯಾಯಾಲಯವು ಸಹ ಮಧ್ಯಂತರ ತೀರ್ಪು ನೀಡಿ ಕೌನ್ಸಿಲಿಂಗ್ ನಡೆಸಿ ಸ್ಥಳ ನಿಯುಕ್ತಿಗೊಳಿಸಬಹುದು ಎಂದು ತೀರ್ಪು ನೀಡಿದ್ದರೂ ಸಹ ಸರ್ಕಾರಿ ನೇಮಕಾತಿ ಆದೇಶ ನೀಡಲು ವಿಳಂಬ ಮಾಡುತ್ತಿರಲು ಕಾರಣಗಳೇನು;

(ಈ) ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ/೦೩/ಹೈಕಕೊ/೨೦೧೯ ದಿನಾಂಕ: ೦೧/೦೨/೨೦೨೩ರ ಆಧಾರದ ಮೇಲೆ ಈಗಾಗಲೇ ಇತರ ಇಲಾಖೆಗಳು ಷರತ್ತುಬದ್ಧ ನೇಮಕಾತಿ ಆದೇಶ ಮತ್ತು ತಾತ್ಕಾಲಿಕ ಸ್ಥಳ ನಿಯುಕ್ತಿ ಮಾಡಿ ಆದೇಶ ಮಾಡಿದ್ದರೂ ಸಹಾಯಕ ಪ್ರಾಧ್ಯಾಪಕರಿಗೆ ನೇಮಕಾತಿ ಆದೇಶ ನೀಡದಿರುವುದಕ್ಕೆ ಕಾರಣಗಳೇನು?

## ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ ಬೋಧಕ/ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡುವ ಬಗ್ಗೆ

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ ) –**

೭೪ (೫೯೨) ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಎಲ್ಲಾ ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ ಮಂಜೂರಾಗಿರುವ ಬೋಧಕ/ಬೋಧಕೇತರ ಹುದ್ದೆಗಳ ಸಂಖ್ಯೆ ಎಷ್ಟು; (ವಿಷಯವಾರು, ವಿಭಾಗವಾರು ಮಾಹಿತಿ ನೀಡುವುದು)

(ಆ) ರಾಜ್ಯದ ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ ಹಲವಾರು ವರ್ಷಗಳಿಂದ ಖಾಲಿ ಆಗಿರುವ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಅನುಮತಿ ನೀಡದಿರಲು ಕಾರಣಗಳೇನು;

(ಇ) ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ ಖಾಯಂ ಬೋಧಕ/ಬೋಧಕೇತರ ಹುದ್ದೆಗಳನ್ನು ತುಂಬದಿರುವುದರಿಂದ ಆಡಳಿತ ಮತ್ತು ವಿದ್ಯಾರ್ಥಿಗಳ ಶಿಕ್ಷಣಕ್ಕೆ ತೊಂದರೆಯಾಗುತ್ತಿದ್ದರೂ ಇದುವರೆವಿಗೆ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿ ನೀಡದಿರಲು ಕಾರಣವೇನು;

(ಈ) ಯಾವ ಕಾಲಮಿತಿಯಲ್ಲಿ ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮಕೈಗೊಳ್ಳಲಾಗುವುದು?

## ಅಕ್ಷರ ದಾಸೋಹ ಯೋಜನೆಯಡಿಯಲ್ಲಿ ವಿದ್ಯಾರ್ಥಿಗಳಿಗೆ ಆಗುತ್ತಿರುವ ತೊಂದರೆ ಕುರಿತು

**ಶ್ರೀ ಶರಣಗೌಡ ಬಯ್ಯಾಪುರ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೭೫ (೫೭೧) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಅಕ್ಷರ ದಾಸೋಹ ಯೋಜನೆಯಡಿಯಲ್ಲಿ ಶಾಲಾ ಮಕ್ಕಳಿಗೆ ಬಿಸಿಯೂಟ ವಿತರಿಸುತ್ತಿದ್ದು, ಸಂಪೂರ್ಣ ಪ್ರಮಾಣದಲ್ಲಿ ಶಾಲೆಗಳಿಗೆ ಸರಿಯಾಗಿ ದಾಸ್ತಾನು

ಆಗುತ್ತಿಲ್ಲದಿರುವುದರಿಂದ ಪ್ರೌಢಶಾಲಾ ಮುಖ್ಯ ಗುರುಗಳು ತುಂಬಾ ತೊಂದರೆಯನ್ನು ಅನುಭವಿಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು)

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಕಾಸೂ 258 – ಪಿ2

**List of Questions**
**for Oral Answers**

**Total No. of**
**Questions - 15**

# LIST - 5

# KARNATAKA LEGISLATIVE COUNCIL

## ONE HUNDRED AND FIFTY THIRD SESSION

## Monday, the 22nd July, 2024

### GROUP - I

1. Minister for Food and Civil Supplies and Consumer Affairs
2. Minister for Energy
3. Minister for Health and Family Welfare
4. Minister for Forest, Ecology and Environment
5. Minister for Medical Education and Skill Development
6. Minister for Primary and Secondary Education
7. Minister for Higher Education

### INCREASE OF BREAST AND CERVICAL CANCER IN WOMEN

**Sri. K.A. Thippeswamy (Nominated) -**

61 (643) Will the Minister for Health and Family Welfare be pleased to state:-

(a) whether it has come to the notice of the Government that the breast and cervical cancers are being increased in recent days in the State;

(b) if so, whether the Government has carried out the study/assessment in this regard; if so, the details of this study/assessment; (districtwise complete details be furnished)

(c) whether the cancer checkup has been made mandatory for women in the age group of 35 to 40 in the State; if not, whether it would be made mandatory for the same; (complete information be furnished)

(d) the particulars of assistance and facilities which are being provided by the Central Government to the State Government to prevent the cancer under National Health Drive and other schemes; (complete information be furnished)

(e) whether the Government made mandatory the human papilloma virus-data test for the girls of 9 to 14 years of age; whether the Government has contemplated to provide this vaccine in free of cost or concession rate? (complete information be furnished)

**REGARDING SOLAR WATER PUMPSET SCHEME (SWP)**

**Sri. Kushalappa M.P. (suja) (Local Authorities Constituency) -**

62 (640) Will the Minister for Energy be pleased to state:-

(a) an order has been issued to implement the scheme of providing solar pumpset connection by discontinuing the scheme of electric pumpset connection that has been provided for agriculture for farmers in the State and order copy be furnished;

(b) the number of beneficiaries of electric pumpset connection that has been provided already in Kodagu district; the number of applications that have been submitted for solar pumpset connection scheme;

(c) the details of subsidy that has been provided for this scheme be furnished;

(d) whether it has come to the notice of the Government that the farmers are urging to continue the connection of electric pumpset scheme due to the hardship being caused for the maintenance of solar powered pumpset connection scheme for the farmers of Kodagu district, if so, the step taken by the Government?

## SHOWCAUSE NOTICE ISSUED TO CHITRADURGA MEDICAL COLLEGE AND RESEARCH INSTITUTE

**Sri. Naveen. K.S (Local Authorities Constituency) -**

63 (724) Will the Minister for Medical Education and Skill Development be pleased to state:-

(a) whether it has come to the notice of the Government that the showcause notice has been issued by the National Medical Commission (N.M.C) to chitradurga medical college and research institute;

(b) it has come to the notice that the information given by chitradurga medical college and research institute in the format of annual declaration to National Medical Commission was defective, the manner in which the response has been given by the college in this regard; the stand of the Government for the same;

(c) the National Medical Commission (NMC) has informed that MBBS seats will be reduced to chitradurga medical college and research institute, the steps taken by the Government in this regard;

(d) the grant that has been provided to fulfill the facilities like college building and hostels facilities for students who got admission in this college ? (details be furnished)

## CONTAMINATION OF LAKES IN SURROUNDINGS OF BENGALURU CITY

**Sri. S. Ravi (Local Authorities Constituency) -**

64(615) Will the Minister for Forest, Ecology and Environment be pleased to state:-

(a) whether it has come to the notice of the Government that the showcause notice has been issued by the National Medical Commission (N.M.C) to chitradurga medical college and research institute;

(b) whether the industries which are discharging contaminated water and industrial waste into these lakes have been identified; if so, the action taken by the Government against them; (details along with documents be furnished)

(c) the steps taken by the Government to prevent the discharging of contaminated water and industrial waste into the lakes? (details be furnished)

## ESTABLISHMENT OF REGIONAL DRUGS TESTING LABORATORY IN MYSURU DIVISION

**Sri. Madhu G.Madegowda (Graduates' Constituency) -**

65 (609) Will the Minister for Health and Family Welfare be pleased to state:-

(a) the places where drugs testing laboratories have been established for the analysis of the standards of drugs and cosmetics; (details be furnished)

(b) the number of posts of the Government analysist that have been sanctioned, working and lying vacant for the drugs testing lasboratories; (details be furnished)

(c) the particulars of drugs testing laboratories to where the drugs samplings are being sent to test the standards of drugs and cosmetics of mysuru division;

(d) the stand of the Government with regard to establishment of regional drugs testing laboratory in mysuru division as facilitating to test the standards of drugs and cosmetics and to provide the analysis reports quickly as there are more number of drug manufacturing units, stores and drug shops in mysuru division? (details be furnished)

## DRUGS AND MEDICAL OFFICERS OF AYUSH DEPARTMENT

**Sri. H.S. Gopinath (Local Authorities Constituency) -** 66 (671) Will the Minister for Health and Family Welfare be pleased to state:-

(a) the number of ayush hospital in Bengaluru and Bengaluru rural districts; (details be furnished)

(b) whether it has come to the notice of the Government that the complaints are being received by the public with regard to non availability of drugs properly to patients in this ayush hospitals; if so, the steps taken by the Government in this regard;

(c) the total number of Government medical officers who are working in the ayush department and out of them, the number of doctors who have got post graduation degree;

(d) whether the proposal is before the Government for commencement of the Government ayush hospital in each assembly constituency; (details be furnished)

(e) out of the doctors and staff who are working in the Government ayush department, the number of doctors and staff who are absent for the work; whether it has come to the notice of the Government that they are absent unauthorisedly; if so, the step taken by the Government in this regard? (complete details be furnished)

## APPOINTMENT OF RETIRED OFFICERS IN FOREST DEPARTMENT

**Sri. Sunil Vallyapur (Elected by Legislative Assembly) -**

67 (701) Will the Minister for Forest, Ecology and Environment be pleased to state:-

(a) whether it has come to the notice of the Government that forest settlement officers (retired officers) have been appointed for the work of determining the forest area in the cases under section 4 of the Karnataka Forest Act -1963;

(b) if so, that criteria that is being followed while appointing the said officers; (details be furnished)

(c) the number of officers who have been appointed in this manner in the State; (complete details be furnished)

(d) the reasons for appointing the retired officers as a forest settlement officer instead of sub divisional officer to dispose of the said cases;

(e) the particular of rules in which the said officers have been appointed;

(f) whether there is provision in Law for appointing such retired officers in this manner under section 4 of the Karnataka Forest Act- 1963; (details be furnished)

(g) whether it has come to the notice of the Government that the harassment and injustice is being caused to farmers and public while providing the justice due to the appointment of retired officers in this manner;

(h) the timelimit within which steps would be taken by the Government to appoint the sub divisional officers by cancelling the appointment of retired officers as per the Government order No:FEE:42:EPC:2024, dated:03.02.2024?

## SANCTIONING OF NEW POLYTECHNIC COLLEGE TO SINDHANUR

**Sri. Basanagouda Badarli (Elected by Legislative Assembly) -**

68 (757) Will the Minister for Higher Education be pleased to state:-

(a) whether it is true that the Government Polytechnic College has been shifted to Kagawad that has been sanctioned to Sindhanur during 2017 - 18; if so, the reasons for which the same has been shifted; whether the proposal is before the Government to sanction the new polytechnic college to Sindhnur; (details be furnished)

(b) there are 50 Government secondary schools, 11 aided secondary schools and 39 unaided schools in Sindhnur taluk and it has highest number of secondary schools in Kalyana Karnataka region, whether the step would be taken by the Government to sanction the new polytechnic college to Sindhnur immediately for the convenience of students due to the students who have passed from these secondary schools are going other districts for pursuing the education of diploma course?

## MENACE OF FAKE DOCTORS IN KALABURAGI

**Sri. Thippanappa Kamaknoor (Elected by Legislative Assembly) -**

69 (574) Will the Minister for Health and Family Welfare be pleased to state:-

(a) the number of fake doctors who have been identified and their clinics operated by them have been shut down after initiating the .action against them so far in kalaburagi city; (details be furnished)

(b) the number of clinics in which the treatment is being provided through opening private clinic by fake doctors; (details alongwith name be furnished)

(c) the particulars of action that has been initiated against them? (details be furnished)

**ESTABLISHMENT OF FOREST UNIVERSITY (COLLEGE) IN CHAMARAJANAGARA**

**Dr. Yathindra S (Elected by Legislative Assembly) -**

70 (657) Will the Minister for Forest, Ecology and Environment be pleased to state:-

as the Chamarajanagara district is having 48.36% of forest area and it is suitable to establish a new "Forest University (College)", whether the proposal is before the State Government in this regard; if so, the present stage of the same?

**ENHANCING OF SALARY FOR UNAIDED P.U.COLLEGE LECTURERS**

**Sri. S.L. Bhojegowda (Teachers' Constituency) -**

71 (649) Will the Minister for Primary and Secondary Education be pleased to state:-

(a) whether it has come to the notice of the Government that as the salary which has been given to the lecturers who are working in unaided pre-university colleges is very low, hence the hardship is being faced by lecturers to get the proper treatment on time during illness as they are unable to spend medical expenses;

(b) the measure of the Government with regard to the extension of Arogya Sanjeevini or health card for the benefit of lecturers who are working is unaided colleges;

(c) whether proposal is before the Government with regard to extension of Arogya Sanjeevani facility to aided college employees in the same manner as it is providing to the employees of Government pre-university colleges; if so, the date on which the facility would be implemented?

## NON-ISSUANCE OF PROMOTION FOR TEACHERS OF GOVERNMENT SECONDARY SCHOOLS

**Dr. Chandrashekara Basavaraja Patil (Graduates' Constituency) -**

72 (707) Will the Minister for Primary and Secondary Education be pleased to state:-

(a) whether it has come to the notice of the Government that the promotion has not been issued to assistant teachers of Government secondary school as lecturer to pre- university college during the last 12 years;

(b) if so, the reasons for not issuing the promotion;

(c) the timelimit within which the promotion would be issued for them?

## ISSUANCE OF APPOINTMENT ORDER FOR ASSISTANT PROFESSORS

**Sri. Chidanand M.Gowda (Graduates' Constituency) -**

73 (715) Will the Minister for Higher Education be pleased to state:-

(a) the present stage of the process of issuance of appointment order for the candidates who have been selected in the recruitment of assistant professor in 2021;

(b) the reasons for the delay is being caused to issue the appointment order for the candidates while selection list is published and eventhough the verification of document is almost completed;

(c) the reasons for the delay is being caused to issue the appointment order by the Government eventhough the Karnataka Administrative Tribunal has upheld the circular of the Government regarding the issue of reservation of Hyderabad- Karnataka division and also the interim judgement has been issued by the Hon'ble High Court that the posting can be given by conducting counselling;

(d) the reasons for the appointment order has not been issued for assistant professors eventhough the orders have been issuedc by other departments with conditional appointment order and temporary placement as per Government order No.DPAR/03/HKQ/2019, dated:01/02/2023 ?

**PERMISSION TO FILLING UP OF VACANT TEACHING AND NON TEACHING POSTS IN THE GOVERNMENT UNIVERSITIES**

**Sri. Puttanna (Teachers' Constituency) -**

74 (592) Will the Minister for Higher Education be pleased to state:-

(a) the number of teaching/non-teaching posts that have been sanctioned to all Government universities of the State; (subjectwise and divisionwise information be furnished)

(b) whether it has come to the notice of the Government that the permission has not been given to fill up the vacant posts which have been lying vacant from several years in the Government universities of the State; the reasons for not giving the permission;

(c) the reasons for not giving the permission to fill up the posts so far eventhough the hardship is being caused to the administration and education of the students due to not filling up of the permanent

teaching/non teaching posts that are lying vacant in the universities;

(d) the timelimit within the step would be taken to fill up this vacant posts?

## PROBLEM CAUSED FOR STUDENTS UNDER AKSHARA DASOHA SCHEME

**Sri Sharanagouda Bayyapur (Local Authorities Constituency) -**

75 (571) Will the Minister for Primary and Secondary Education be pleased to state:-

(a) the mid day meal has been providing for School children under Akshara Dasoha scheme in the Government primary and secondary schools, whether it has come to the notice of the Government that the hardship is being faced by the headmasters of secondary school with regard to supplying insufficient quantity stock for the schools;

(b) if so, the step taken by the Government in this regard? (complete information be furnished)

**K.R. MAHALAKSHMI**
Secretary
Karnataka Legislative Council

Government Press, Vikasa Soudha Unit, Bengaluru, P2